ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ. 333 / 2021.

ಪ್ರಾ.ಸಾ.: 4
ಚಾ.ಸಾ.: 4

| | | |
|---|---|---|
| ಹೆಸರು | : | ಕೆ. ಕೆ. ವಿಜಯ್ |
| ತಂದೆಯ ಹೆಸರು | : | ಕಣ್ಣನ್ ನಾಯಕ್ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಿಳಾಸ | : | ಕೇರಳ |

... ........................................................................................................... ...

ದಿನಾಂಕ 15 ನೇ ಮಾರ್ಚ್ 2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

1. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿ ಘಟನಾ ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿ.ಪಿ. - 15 ಎಂದು ಗುರುತಿಸಲಾಗಿದೆ. ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿ.ಪಿ. - 15 (ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅಪಘಾತ ವಿಚಾರವಾಗಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪೊಲೀಸರು ಅಪಘಾತ ಪಡಿಸಿದ ವಾಹನವನ್ನು ವಶಪಡಿಸಿಕೊಂಡರು. ಮಹಜರ್ ಅನ್ನು ಸಂಜೆ ಸಮಯದಲ್ಲಿ ಮಾಡಿರುತ್ತಾರೆ.

2. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿ ಸ್ವತ್ತು ಬಿಡುಗಡೆ ಮಹಜರ್ ಆಗಿದ್ದು, ಅದನ್ನು ನಿ.ಪಿ. - 16 ಎಂದು ಗುರುತಿಸಲಾಯಿತು. ಸಾಕ್ಷಿಯು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿ.ಪಿ. - 16 (ಎ) ಎಂದು ಗುರುತಿಸಲಾಯಿತು. ನಿ. ಪಿ. 15 ಮಹಜರ್ ಜರುಗಿಸಿದ 2 ದಿನದ ನಂತರ ನಿ. ಪಿ. 16 ಕ್ಕೆ ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ವಾಹನ ಬಿಡುಗಡೆ ಮಹಜರ್ ಸಮಯದಲ್ಲಿ ಮಾಡಿರುತ್ತೇನೆ. ನಿ. ಪಿ. 1 ರಿಂದ 13 ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಮುಖ್ಯ ವಿಚಾರಣೆ ಃ ಮುಕ್ತಾಯ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಜೆ. ಎಸ್. ಎಸ್ ವಕೀಲರಿಂದಃ -

1. ಅಪಘಾತ ಪಡಿಸಿದ ವಾಹನ ನನ್ನ ಸ್ನೇಹಿತನಿಗೆ ಸೇರಿದ ವಾಹನ ಆಗಿರುತ್ತದೆ. ನಿ. ಪಿ. 15 ಮತ್ತು 16 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನಗೆ ಕನ್ನಡ ಓದಲು ಹಾಗೂ ಬರೆಯಲು ಬರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಪಾಟೀ ಸವಾಲುಃ ಮುಕ್ತಾಯ

<u>ಮರು ವಿಚಾರಣೆ : -</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

(ಸಾಕ್ಷಿಯವರ ಸಹಿ) ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.